ಪವರ್ ಕಟ್ ಮಾಡಬೇಕಾಗುತ್ತದೆ. ಆದುದರಿಂದ ಅಲ್ಲಿನ ಪ್ರತಿನಿಧಿಗಳು ಯಾವ ಟೈಮ್‌ನಲ್ಲಿ ಕಟ್ ಮಾಡಿದರೆ ಅನುಕೂಲ ಎಂದು ಹೇಳುತ್ತೀರೋ ಆದರಂತೆ ನಾವು ವ್ಯವಸ್ಥೆ ಮಾಡುವುದಕ್ಕೆ ಸಿದ್ಧವಾಗಿದ್ದೇವೆ.

ಶ್ರೀ ಸಿ. ಭೈರೇಗೌಡ.—ರೈತ ಪ್ರತಿನಿಧಿಗಳ ಜೊತೆ ಮಾತನಾಡುವಾಗ ಸರ್ಕಾರದವರು ಒಪ್ಪಿದ್ದಾರೆ. ಮಾನ್ಯ ಬೊಮ್ಮಾಯಿಯವರೂ ಒಪ್ಪಿದ್ದಾರೆ. ಆದುದರಿಂದ ಈಗಾಗಲೇ ಹೇಳಿರತಕ್ಕಂಥಾದನ್ನು ಕಾರ್ಯರೂಪಕ್ಕೆ ತರಬೇಕೆಂದು ವಿನಂತಿಸುತ್ತೇನೆ.

ಉಪಾಧ್ಯಕ್ಷರು.—ತಾವು ಬೇರೆ ರೀತಿಯಲ್ಲಿ ಸೂಚನೆ ಕೊಡಿ. ಅದಕ್ಕೆ ಉತ್ತರ ಹೇಳಂತ್ತಾರೆ.

ನಿಯಮ ೩೩ಳಿರ ಮೇರೆಗೆ

ಉಪಾಧ್ಯಕ್ಷರು.—ಈಗ ೩೩ಳಿರ ನಿಯಮದ ಮೇರೆಗೆ ಬಂದಿರತಕ್ಕಂಥ ನೋಟೀಸುಗಳನ್ನು ಓದುತ್ತೇನೆ. ಮೊದಲಿಗೆ ಶ್ರೀ ಮಾಲೀಕಯ್ಯ ಗುತ್ತೇದಾರ್–ಅಬ್ಸೆಂಟ್, ಶ್ರೀ ಹೆಚ್.ಬಿ.ದ್ಯಾವೀರಪ್ಪ–ಅಬ್ಸೆಂಟ್, ನೆಕ್ಸ್‌ಟ್ ಶ್ರೀ ಬಿ.ಎಸ್. ಯಡಿಯೂರಪ್ಪ ;

(1) ಶಿಕಾರಿಪುರ ತಾಲ್ಲೂಕಿನಲ್ಲಿ ಭೀಕರ ಬರಗಾಲವಿದ್ದರೂ ಅಧಿಕಾರಿಗಳು ನೀರಾವರಿ ತೆರಿಗೆಯನ್ನು ವಸೂಲು ಮಾಡುತ್ತಿರುವುದು

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ)—ಮಾನ್ಯ ಅಧ್ಯಕ್ಷರೇ ೧೯೮೭-೮೮ನೇ ಸಾಲಿನಲ್ಲಿ ಶಿಕಾರಿಪುರ ತಾಲ್ಲೂಕಿನ ರೈತರು ಭೀಕರ ಬರಗಾಲಕ್ಕೆ ತುತ್ತಾಗಿ ಇದರ ಪರಿಣಾಮ ೧೫೦ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಶೇಕಡ ೨೫ಕ್ಕೂ ಕಡಿಮೆ ಬೆಳೆ ಬಂದಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರಕ್ಕೆ ವರದಿ ಕಳಿಸಿದ್ದರು. ಸರ್ಕಾರ ೨ ತಿಂಗಳ ಹಿಂದೆ ಕಂದಾಯ ವಸೂಲಿ ಬಗ್ಗೆ ಒಂದು ಆಜ್ಞೆ ಹೊರಡಿಸಿರುವ ಪರಿಣಾಮ ಕಂದಾಯ ಮತ್ತು ನೀರಾವರಿ ತೆರಿಗೆಯನ್ನು ಕಟ್ಟುನಿಟ್ಟಾಗಿ ವಸೂಲು ಮಾಡುತ್ತಾ. ರೈತರಿಗೆ ಅಧಿಕಾರಿಗಳು ಕಿರುಕುಳ ಕೊಡುತ್ತಿದ್ದಾರೆ. ಒಂದು ಹೊತ್ತಿನ ಗಂಜಿಗೂ ಯೋಚಿಸುತ್ತಿರುವ ಬರಗಾಲಕ್ಕೆ ತುತ್ತಾದ ರೈತರಿಂದ ಕಂದಾಯ ಹಾಗೂ ನೀರಾವರಿ ತೆರಿಗೆ ವಸೂಲಿ ಮಾಡದಂತೆ ಅಧಿಕಾರಿಗಳಿಗೆ ಆದೇಶ ನೀಡುವ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಂಬಂಧಪಟ್ಟ ಸಚಿವರಿಂದ ಉತ್ತರ ತರಿಸಿ, ಸನ್ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆ.

(2) ವಿದ್ಯುಚ್ಛಕ್ತಿ ಮಂಡಳಿಯವರಿಂದ ಬಳಕೆದಾರರಿಂದ ತಾರತಮ್ಯವಿರುವ ದರವನ್ನು ವಿಧಿಸಿ ವಸೂಲು ಮಾಡುತ್ತಿರುವುದು

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) — ಸನ್ಮಾನ್ಯ ಅಧ್ಯಕ್ಷರೇ ಕರ್ನಾಟಕ ರಾಜ್ಯಾದ್ಯಂತ ಈ ತಿಂಗಳಿಂದಲೇ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ಸುಮಾರು ೫೦ ಲಕ್ಷಕ್ಕೂ ಮೇಲ್ಪಟ್ಟು ಬಡ ಸಂಸಾರಗಳ ಬಳಕೆದಾರರಿಂದ ಲೈಟ್ ಕನೆಕ್ಷನ್‌ಗೆ ಒಂದು ಪೊತ್ತ, ಎ.ಇ.ಹೆಚ್. ಕನೆಕ್ಷನ್‌ಗೆ ಒಂದು ಪೊತ್ತ. ಪ್ರತಿ ಆಕ್ಷರಕ್ಕೂ ಮತ್ತೊಂದು ಪೊತ್ತವೆಂದು ಎಡಾಪಟ್ಟು ಕಟ್ಟುವರಿ ಡಿಪಾಸಿಟ್ ಪಡೆಯಲು ಬಿಲ್‌ಗಳಲ್ಲಿ ಪೊತ್ತವನ್ನು ಅಳವಡಿಸಿ, ಬಲಾತ್ಕಾರ ವಸೂಲಿಗೆ ಹೊರಟಿರುವುದರಿಂದ, ಜನರಲ್ಲಿ ಹಾಹಾಕಾರವೆದ್ದು ಜನತೆ ಇದನ್ನು ಪ್ರತಿಭಟಿಸಲು (ಡಿಪಾಸಿಟ್–೨) ೨ನೇ ಮತ್ತು ೩ನೇ ಡಿಪಾಸಿಟ್‌ನ್ನು ವಸೂಲು ಮಾಡುವ ಆಜ್ಞೆಯನ್ನು ವಾಪಸ್ಸು ಪಡೆಯುವಂತೆ ಒತ್ತಾಯಿಸಲು ಪ್ರತಿಭಟನೆ ಹಾದಿಗೆ ಇಳಿದಿದ್ದಾರೆ ; ಈ ಅನ್ಯಾಯದ ಆಜ್ಞೆಯನ್ನು ವಿದ್ಯುಚ್ಛಕ್ತಿ ಮಂಡಳಿಗೆ ತಿಳಿಸಿ, ಬಲಾತ್ಕಾರ ವಸೂಲಾತಿಯನ್ನು ನಿಲ್ಲಿಸಿ, ಜನತೆಯ ಬೇಬಕ್ಕೆ ಬರುವುದು ಅವಶ್ಯಕ. ಈ ಬಗ್ಗೆ ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಯವರು ಹೇಳಿಕೆಯನ್ನು ಸದನದಲ್ಲಿ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಲಕ್ಷ್ಮಿನರಸಿಂಹಯ್ಯ.—ಈ ವಿಷಯದಲ್ಲಿ ನಿಮಗೆ ಉತ್ತರ ಒದಗಿಸಿಕೊಡುತ್ತೇನೆ. ಇದರಲ್ಲಿ ಒಂದು ಏನೆಂದರೆ ೨ ಎಂ.ಎಂ.ಡಿ. ಎಂದು ಕಲೆಕ್ಟ್ ಮಾಡುತ್ತಿದ್ದರು. ಈಗ ೩ ಎಂ.ಎಂ.ಡಿ. ಎಂದು

ಕಲೆಕ್ಟ್ ಮಾಡುತ್ತಿದ್ದಾರೆ. ಟಾರಿಫ್ ಬಹಳವಾಗಿರುವುದರಿಂದ, ಕನ್ಸೆಸ್ಷನ್ ಮೇಲೆ ಮೂರು ಮೇಲೆ ಮೂರು ಟೈಮ್ಸ್ ಮಾಡಿ ಡಿಫರೆನ್ಸ್ ಮಾತ್ರ ಕಲೆಕ್ಟ್ ಮಾಡುತ್ತಿದ್ದಾರೆ, ಒಂದು ತಿಂಗಳಿಗೆ ಮಾತ್ರ ಹೆಚ್ಚುವರಿ ಕೇಳುತ್ತಿದ್ದಾರೆ, ನೀವು ಹೇಳತಕ್ಕಂಥ ರೀತಿಯಲ್ಲಿ ಪ್ರತಿಭಟನೆ ಆಗಲೀ ಮತ್ತೊಂದು ಆಗಲಿ ಇಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಕೆಲವರಿಂದ ಕೊಟ್ಟಿಗಟ್ಟಲೆ ಉಳಿದಿದ್ದರೂ ಅದನ್ನು ನಿಮಗೆ ವಸೂಲ್ಮಾಡುವುದಕ್ಕಾಗುತ್ತಿಲ್ಲ, ಬಡವರಿಗೆ ಮಾತ್ರ ೩-೩ ತಿಂಗಳಿಗೆ ವಸೂಲ್ಮಾಡುತ್ತೀರಿ,

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಸದಸ್ಯರು ಎಲ್ಲಿ ಏನಾಗುತ್ತಿದೆ ಎಂಬುದರ ಬಗ್ಗೆ ಸರಿಯಾಗಿ ಬರೆದು ಕಳುಹಿಸಿದರೆ, ನಾನು ಅವರಿಗೆ ಉತ್ತರ ಕಳುಹಿಸಿಕೊಡುತ್ತೇನೆ.

(3) ಭಟ್ಕಳ ಮತ್ತು ಹೊನ್ನಾವರ ತಾಲ್ಲೂಕಿನಲ್ಲಿ ಭೂ ಸೇನಾ ನಿಗಮದವರಿಂ ಮಾಡಿರುವ ಕಳಪೆ ಕೆಲಸಗಳ ಬಗ್ಗೆ ಕ್ರಮ ತೆಗೆದುಕೊಳ್ಳುವುದು

ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ಅಧ್ಯಕ್ಷರೇ, ಭಟ್ಕಳ ತಾಲ್ಲೂಕಿನ ಬೈಲೂರಿ ಗ್ರಾಮದ ಕೈರಫಟ್ಟ ಬಂದಾರವನ್ನು ಭೂ ಸೇನಾ ನಿಗಮದವರು ಅತ್ಯಂತ ಕಳಪೆಯಾಗಿ ನಿರ್ಮಿಸಿದ್ದರಿಂದ ಅದರ ಬಗ್ಗೆ ತನಿಖೆ ಆಗಬೇಕೆಂದು ಪದೇ ಪದೇ ಒತ್ತಾಯಿಸಿದ್ದರಿಂದ, ಕಾರವಾರ ವಿಶೇಷ ಜಿಲ್ಲಾಧಿಕಾರಿಗಳು, ಈ ಕೆಲಸದ ಜೊತೆಗೆ ಹೊನ್ನಾವರ ತಾಲ್ಲೂಕಿನಲ್ಲಿಯ ಏತ ನೀರಾವರಿ ಯೋಜನೆ ಸಹ ಅದೇ ರೀತಿಯಾಗಿ ಕಳಪೆಯ ಕೆಲಸವೆಂದು ನಿರ್ಧರಿಸಿ, ಸರಕಾರಕ್ಕೆ ವರದಿ ಸಲ್ಲಿಸಿದ್ದರಿಂದ, ಇದರ ಬಗ್ಗೆ ತನಿಖೆ ಮಾಡಲು ಒಂದು ತನಿಖಾ ಸಮಿತಿಯನ್ನು ನಿಯಮಿಸಲಾಗಿದೆಯೆಂದು ಹೇಳಿಕೆ ನೀಡಿ ಈ ವಿಷಯವನ್ನು ಮರೆಸಲು ಯತ್ನಿಸಲಾಗಿದೆ. ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಸಹ ಯಾರಿಗೂ ತಿಳಿಸದೆ ಕೈರಫಟ್ಟ ಬಂದಾರ ನೋಡಿ ಬಂದುದಾಗಿ ವದಂತಿ ಇದೆ. ಸಮಿತಿಯ ವರದಿ ಏನು ಬಂದಿದೆ ? ವರದಿ ಬಂದಿದ್ದಲ್ಲಿ ಅದು ಯಾವಾಗ ಬರಬಹುದು ಎನ್ನುವುದರ ಬಗ್ಗೆ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಭೂ ಸೇನಾ ನಿಗಮ ಮಾಡಿದ ಕೆಲಸ ಕಳಪೆಯೆದೇ ಎನ್ನುವ ಬಗ್ಗೆ ಹೇಳಿಕೆ ನೀಡುವ ಬಗ್ಗೆ ಸರಕಾರದ ಗಮನ ಸೆಳೆಯಲಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು)—ಮಾನ್ಯ ಅಧ್ಯಕ್ಷರೇ ನಾನು ವರದಿ ತರಿಸಿ ಸನ್ಮಾನ್ಯ ಸದಸ್ಯರಿಗೆ ಉತ್ತರ ಒದಗಿಸಿಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ.....

ಉಪಾಧ್ಯಕ್ಷರು.—ಇದರ ಬಗ್ಗೆ ಮುಂದೆ ಕೇಳುವುದಕ್ಕೆ ಆಗುವುದಿಲ್ಲ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಮಂತ್ರಿಗಳು ಇಲ್ಲಿ ಇರಬಾರದು ಎಂದು ನಿಯಮ ಇದೆಯೇ. ಎಷ್ಟೊಂದು ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದಾರೆ, ಆದರೆ ಎಷ್ಟು ಜನ ಮಂತ್ರಿಗಳು ಇಲ್ಲಿ ಇದ್ದಾರೆ ತಾವೇ ನೋಡಿ.

ಉಪಾಧ್ಯಕ್ಷರು.—ಅದನ್ನು ತಾವು ಕೇಳುವುದಕ್ಕೆ ಬರುವುದಿಲ್ಲ. ತಮಗೆ ಉತ್ತರ ಕೊಡಿಸುತ್ತೇನೆ.

ಶ್ರೀ ಆರ್. ಎನ್. ನಾಯಕ್.—ನಾನು ಪಾಯಿಂಟ್ ಆಫ್ ಆರ್ಡರ್ ಎತ್ತುತ್ತೇನೆ, ಈ ಅವಧಿಯಲ್ಲಿ ಪಾಯಿಂಟ್ ಆಫ್ ಆರ್ಡರ್ ಹಾಕಬಾರದೆಂದೇನೂ ಇಲ್ಲ,

ಉಪಾಧ್ಯಕ್ಷರು.—ಪ್ರಶ್ನೆ ಇದಲ್ಲ, ತಮಗೆ ನಂತರ ಉತ್ತರ ಕೊಡುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಆ ಸದನದಲ್ಲಿ ಇದ್ದಾರೆ.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಇನ್ನೊಂದು ಸದನದಲ್ಲಿ ಇದ್ದಾರೆ. ಸಂಬಂಧಪಟ್ಟ ಸಚಿವರಿಗೆ ಮಾನ್ಯ ಕಾನೂನು ಸಂಸದೀಯ ಮಂತ್ರಿಗಳು ವಿಚಾರ ತಿಳಿಸುತ್ತಾರೆ, ಅವರು ತಮಗೆ ಉತ್ತರ ತರಿಸಿಕೊಡುತ್ತಾರೆ.

ಶ್ರೀ ಆರ್. ಎನ್. ನಾಯಕ್.—ಸರಕಾರಕ್ಕೆ ಎಲ್ಲಾ ವ್ಯವಸ್ಥೆ ಇದೆ, ಅವರು ಟೆಲಿಗ್ರಾಂ ಮಾಡಬಹುದು, ಟೆಲಿಫೋನ್ ಮಾಡಬಹುದು, ಉತ್ತರ ತರಿಸಿ ಕೊಡಬಹುದು. ನಾವು ಈ ನೋಟೀಸನ್ನು ಒಂದು ದಿನ ಮುಂಚೆಯೇ ಕೊಟ್ಟಿರುತ್ತೇವೆ.